ಕರ್ನಾಟಕ ಸರ್ಕಾರ (ಸಿ.ಆರ್.ಪಿ. 67)

| |
|---|
| ಹೇಳಿಕೆ ಹಾಳೆ<br>(ಆರ್.ಪಿ. ಸಂಖ್ಯೆ 57)<br>ನಮೂನೆ ಸಂಖ್ಯೆ 4<br>(ಸಿವಿಲ್) |

ದಿವಾಣಿ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ.ದಂ. ಹಳಿಯಾಳ
ಇವರ ನ್ಯಾಯಾಲಯದಲ್ಲಿ,
ಸಿ.ಸಿ. ನಂ.: 268/2016

..........................................................................

CW 11
PW 11

| | | |
|---|---|---|
| ಹೆಸರು | : | ಪಾಂಡುರಂಗ ನಾಗೋಜಿಯವರ |
| ತಂದೆಯ ಹೆಸರು | : | ತಾನಾಜಿ |
| ವಯಸ್ಸು | : | 45 ವರ್ಷ |
| ಉದ್ಯೋಗ | : | ಹೆಡ್ ಕಾನ್ಸ್ಟೆಬಲ್ |
| ವಾಸಸ್ಥಳ | : | ಶಿರಸಿ. |

ದಿನಾಂಕ 18-10-2023 ರಂದು ಸತ್ಯಪ್ರತಿಜ್ಞೆ ಮೇಲೆ ಪ್ರಮಾಣವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ** : ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ :

2009 ರಿಂದ 2017 ವರೆಗೆ ನಾನು ಹಳಿಯಾಳ ಪೊಲೀಸ ವೃತ್ತ ಕಚೇರಿಯಲ್ಲಿ ಚಾಲಕನಾಗಿ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ಈ ಪ್ರಕರಣದ ಆರೋಪಿಯು ಮಾರ್ಚ 2012 ರಿಂದ ಹಳಿಯಾಳ ವೃತ್ತ ಕಚೇರಿಯಲ್ಲಿ ಟಪಾಲು ಮತ್ತು ರಜಿಸ್ಟರ ನಿರ್ವಹಣೆ ಮಾಡುತ್ತಿದ್ದರು ಹಾಗೂ ಸಿ ಪಿ ಐ ರವರು ನೀಡಿದ ಸ್ಥಳ ದಂಡ ಹಣವನ್ನು ಆರೋಪಿಯು ಟ್ರೆಜರಿಗೆ ಹೋಗಿ ಅಲ್ಲಿ ಚಲನ್ ಗೆ ಸೀಲ್ ಹೊಡೆಸಿಕೊಂಡು ನಂತರ ಸದರಿ ಹಣವನ್ನು ಎಸ್ ಬಿ ಐ ಬ್ಯಾಂಕಿಗೆ ತುಂಬುವ ಕರ್ತವ್ಯ ಮಾಡುತ್ತಿದ್ದನು. ಆರೋಪಿಯು ಆ ರೀತಿ ಸ್ಥಳ ದಂಡ ಹಣವನ್ನು ತುಂಬುವಾಗ ಆ ಬಗ್ಗೆ ನಮಗೆ ಹೇಳಿ ಹೋಗುತ್ತಿದ್ದನು. ಅದೇ ರೀತಿ ಹಣವನ್ನು ಬ್ಯಾಂಕಿಗೆ ತುಂಬಿ ಬಂದ ನಂತರ ಸದರಿ ವಿಚಾರವನ್ನು ಸಹ ನಮಗೆ ಹೇಳುತ್ತಿದ್ದನು.

ದಿನಾಂಕ 10-07-2013 ರಂದು ಸಿ ಪಿ ಐ ರವರಾದ ಚಾಸಾ 1ರ ವರು ಸ್ಥಳ ದಂಡ ಹಣ ಎಷ್ಟು ತುಂಬಿದ್ದಾರೆ ಎಂದು ಟ್ರೆಜರಿ ಕಚೇರಿಯಲ್ಲಿ ನಿರ್ಹವಣೆ ಮಾಡುವ ಲೆಕ್ಕ ಶೀರ್ಷಿಕೆಯನ್ನು ತಂದು ಪರಿಶೀಲನೆ ಮಾಡಿದಾಗ ಮಾರ್ಚ 2012 ರಿಂದ ತುಂಬಿರುವ ಹಣ ಒಟ್ಟು ರೂ. 30,100/- ಎಂದು ನಮೂದಾಗಿದ್ದರೂ ಸಹ ಆರೋಪಿ ಬ್ಯಾಂಕಿಗೆ ತುಂಬಿದ ಹಣ

ಕೇವಲ ರೂ. 2,700/- ಹಣ ಆಗಿರುವುದು ಕಂಡು ಬಂದಿರುತ್ತದೆ. ಉಳಿದ ಹಣವಾದ ರೂ.27,400/- ಹಣವನ್ನು ಆರೋಪಿ ತನ್ನ ಸ್ವಂತಕ್ಕೆ ಬಳಸಿಕೊಂಡಿರುವ ವಿಚಾರ ತಿಳಿದು ಬಂದಿರುತ್ತದೆ. ಬಾಕಿ ಹಣ ತುಂಬಿರುವ ಬಗ್ಗೆ ದಾಖಲೆ ತೋರಿಸು ಎಂದು ಚಾಸಾ 1 ರವರು ಆರೋಪಿಗೆ ಹೇಳಿದಾಗ ಆರೋಪಿಯು ಆ ಬಗ್ಗೆ ಹುಡುಕಿರುತ್ತಾನೆ ಹಾಗೂ ನಾವು ಸಹ ಹುಡುಕಿರುತ್ತೇವೆ. ಆದರೆ ಯಾವುದೇ ದಾಖಲೆ ಸಿಗಲಿಲ್ಲ. ಹಣ ತುಂಬಿದ ಬಗ್ಗೆ ದಾಖಲೆ ಸಿಗದೇ ಇದ್ದಾಗ ಆರೋಪಿಯು ತನ್ನಿಂದ ತಪ್ಪಾಗಿದೆ ಹಾಗೂ ವ್ಯತ್ಯಾಸವಿರುವ ಹಣವನ್ನು ತುಂಬುತ್ತೇನೆ ಎಂದು ಹಾಗೂ ತನ್ನನ್ನು ಕ್ಷಮಿಸಬೇಕೆಂದು ಚಾಸಾ 1 ರವರಲ್ಲಿ ಕೇಳಿಕೊಂಡಿರುತ್ತಾನೆ.

ನಂತರ ದಿನಾಂಕ 15-07-2013 ರಂದು ವ್ಯತ್ಯಾಸ ವಿರುವ ಹಣವನ್ನು ಆರೋಪಿ ತುಂಬಿರುತ್ತಾನೆ ಎನ್ನುವುದು ನನಗೆ ಗೊತ್ತಾಯಿತು. ನಾನು ಚಾಸಾ 1 ರವರ ಜೊತೆ ಕೆಲಸ ಮಾಡುವುದರಿಂದ ಮೇಲೆ ಹೇಳಿದ ವಿಷಯ ನನಗೆ ಚಾಸಾ 1 ರವರ ಮೂಲಕ ತಿಳಿದು ಬಂದಿರುತ್ತದೆ. ಈ ಬಗ್ಗೆ ನಾನು ತನಿಖಾಧಿಕಾರಿಯ ಮುಂದೆ ಹೇಳಿಕೆ ನೀಡಿದ್ದೇನೆ.

**ಪಾಟೀ ಸವಾಲುಃ** ಆರೋಪಿ ಪರ ಶ್ರೀ ಎ ಎಫ್ ಕೆ ವಕೀಲರಿಂದ.

ಚಾಸಾ 1 ಮತ್ತು 15 ರವರು ನಿಮ್ಮ ಮೇಲಾಧಿಕಾರಿ ಎಂದರೆ ಸಾಕ್ಷಿ ಚಾಸಾ 1 ರವರು ತನ್ನ ಮೇಲಾಧಿಕಾರಿ ಎನ್ನುತ್ತಾರೆ. ಚಾಸಾ 1 ರವರು ನನ್ನ ಮೇಲಾಧಿಕಾರಿ ಆಗಿರುವುದರಿಂದ ಅವರ ಹೇಳಿದ ಕಚೇರಿಯ ಕೆಲಸವನ್ನು ನಾನು ಮಾಡುತ್ತೇನೆ ಎಂದರೆ ಸರಿ. ಘಟನೆಯ ಸಮಯದಲ್ಲಿ ನಾನು ಚಾಸಾ 1 ರವರ ಕಚೇರಿಯಲ್ಲಿ ಚಾಲಕನಾಗಿ ಕೆಲಸ ಮಾಡುತ್ತಿದ್ದೆ ಎಂದರೆ ಸರಿ. ಚಾಸಾ 1 ರವರು ಯಾವ ದಿನಾಂಕದಂದು ಆರೋಪಿಯ ವಿರುದ್ಧ ದೂರು ನೀಡಿದ್ದಾರೆ ಎನ್ನುವುದು ನೆನಪಿಗೆ ಬರುತ್ತಿಲ್ಲ. ನಾನ ಘಟನೆಯ ಸಮಯದಲ್ಲಿ ಚಾಲಕನಾಗಿ ಕರ್ತವ್ಯ ಮಾಡುತ್ತಿದ್ದರಿಂದ ಚಾಸಾ 1 ರವರ ಕಚೇರಿಯ ವ್ಯವಹಾರದ ಬಾಬತ್ತು ನನಗೆ ಹೆಚ್ಚಿನ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ದಂಡದ ಪಾವತಿ, ವಾಹನ ನೋಂದಾಣಿ ರಜಿಸ್ಟರ, ಪುಸ್ತಕ ನಿರ್ವಹಣೆ ಕರ್ತವ್ಯವನ್ನು ಆ ಸಮಯದಲ್ಲಿ ಆರೋಪಿ ಮಾಡುತ್ತಿದ್ದ. ಸದರಿ ಕರ್ತವ್ಯದ ಬಗ್ಗೆ ನಿರ್ವಹಣೆ ಮಾಡುವ ರಜಿಸ್ಟರ ಗಳನ್ನು ನಾನು ನೋಡಿರುವುದಿಲ್ಲ. ಆರೋಪಿ ಯಾವ ದಿನಾಂಕ ಎಷ್ಟು ಹಣ ಬ್ಯಾಂಕಿಗೆ ಚಲನ್ ಮೂಲಕ ಪಾವತಿ ಮಾಡಿದ್ದಾನೆ ಎಂದು ನಿಖರವಾಗಿ ಹೇಳಲು ಆಗುವುದಿಲ್ಲ. ವಾಹನ ದಂಡ ದಾಖಲಾತಿ ರಜಿಸ್ಟರ ಮತ್ತು ಬ್ಯಾಂಕಿನಿಂದ ತಂದ ಉಳಿದ ಅರ್ಧ ಚಲನ ಅನ್ನು ಆರೋಪಿಯೇ ಇಟ್ಟುಕೊಳ್ಳುತ್ತಿದ್ದ. ವಾಹನ ದಂಡ ದಾಖಲಾತಿ ರಜಿಸ್ಟರ ಮತ್ತು ಬ್ಯಾಂಕಿನಿಂದ ತಂದ ಉಳಿದ ಅರ್ಧ ಚಲನ ಅನ್ನು ಆರೋಪಿಯು ಚಾಸಾ 1 ರವರಿಗೆ ತೋರಿಸಿದ ನಂತರವೇ ತನ್ನ ಬಳಿ

ಇಟ್ಟುಕೊಳ್ಳುತಿದ್ದನು ಎಂದರೆ ಸರಿ. ಹಳಿಯಾಳ ಉಪ ಖಜಾನೆಯಿಂದ ಪೋಲೀಸ ಲೆಕ್ಕ ಶಿರ್ಷಿಕೆಯ ಘೋಷ್ವಾರೆ ಯನ್ನು ನಾನು ನೋಡಿರುವುದಿಲ್ಲ. ನಾನು ಯಾವ ದಿನಾಂಕದಂದು ತನಿಖಾಧಿಕಾರಿಗೆ ಹೇಳಿಕೆ ನೀಡಿದ್ದೇನೆ ಎನ್ನುವುದು ನೆನಪಿಗೆ ಬರುತ್ತಿಲ್ಲ. ಹೇಳಿಕೆ ನೀಡಿದ್ದರ ಕುರಿತು ಠಾಣಾ ದಿನಚರಿಯಲ್ಲಿ ನಮೂದಿಸಿಲ್ಲ. ಆರೋಪಿ ಯಾವುದೇ ದುರುಪಯೋಗ ಪಡಿಸಿಕೊಂಡಿಲ್ಲ, ಆರೋಪಿ ಯಾವುದೇ ತಪ್ಪು ಮಾಡಿಲ್ಲ, ಚಾಸಾ 1 ರವರು ನೀಡಿದ ದೂರಿಗೆ ಅನುಕೂಲ ಆಗಲೆಂದು ಚಾಸಾ 1 ರವರು ನನ್ನ ಮೇಲಾಧಿಕಾರಿ ಆಗಿರುವುದರಿಂದ ಅವರ ಪರ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದ ಮೇಲೆ ಗಣಕೀಕರಿಸಿದೆ)

ಓ.ಹೇ.ಕೇ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಹಾಗೂ
ಪ್ರ.ದ.ನ್ಯಾ.ದಂ. ಹಳಿಯಾಳ